**ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್**

**( ರಕ್ಷಣಾ ಮಂತ್ರಾಲಯದ ಅಧೀನ ಭಾರತ ಸರ್ಕಾರದ ಒಂದು ಉದ್ಯಮ)**

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್, ಒಂದು ನವರತ್ನ ಮತ್ತು ಭಾರತದ ಪ್ರಮುಖ ವೃತ್ತಿಪರ ಎಲೆಕ್ಟ್ರಾನಿಕ್ಸ್ ಸಂಸ್ಥೆಯ ಬೆಂಗಳೂರು ಘಟಕ ಮತ್ತು ಕಾರ್ಪೊರೇಟ್ ಕಚೇರಿಗೆ ಖಾಯಂ ಆಧಾರದ ಮೇಲೆ ಕೆಳಕಂಡ ಸಿಬ್ಬಂದಿಗಳ ಅವಶ್ಯಕತೆ ಇದೆ.

## ೧.೦ ಹುದ್ದೆಗಳು

| ಕ್ರ. ಸಂ. | ಹುದ್ದೆಯ ಹೆಸರು | ವಿದ್ಯಾರ್ಹತೆ | ವೃತ್ತಿ / ವಿಷಯ | ಹುದ್ದೆಗಳ ಸಂಖ್ಯೆ | ಮೀಸಲಾತಿ ವಿಧ | ವೇತನ ವರ್ಗ / ಬಡ್ತಿಹಾದಿ / ವೇತನ ಶ್ರೇಣಿ |
|---|---|---|---|---|---|---|
| (೧) | (೨) | (೩) | (೪) | (೫) | (೬) | (೭) |
| ೧. | ಎಂಜಿನಿಯರಿಂಗ್ ಸಹಾಯಕಶಿಕ್ಷಣಾರ್ಥಿ (ಇ ಎ ಟಿ)* | ಮಾನ್ಯತೆ ಪಡೆದ ಸಂಸ್ಥೆಯಿಂದ ಕನಿಷ್ಠ ೩ ವರ್ಷಗಳು ಎಂಜಿನಿಯರಿಂಗ್ ನಲ್ಲಿ ಡಿಪ್ಲೋಮಾ | ಕಂಪ್ಯೂಟರ್ ಸೈನ್ಸ್ | ೧೦ | ಸಾಮಾನ್ಯ-೦೬<br>ಇ. ಡಬ್ಲ್ಯು.ಎಸ್-೦೧<br>ಇ.ಹಿ.ವ.- ೦೪<br>ಪ.ಜಾ. -೦೩<br>ಪ.ವ. -೦೧ | ವೇತನ ವರ್ಗ–VII / ಬಡ್ತಿ ಹಾದಿ- VI ವೇತನ ಶ್ರೇಣಿ ರೂ.**24,500** -3%- ರೂ.**90,000**/- **+**ಸ್ವೀಕಾರಾರ್ಹ ಭತ್ಯೆಗಳು |
| | | | ಸಿವಿಲ್ | ೧೬ | | |
| ೨. | ತಂತ್ರಜ್ಞ- ಸಿ | ಎಸ್ ಎಸ್ ಎಲ್ ಸಿ + ಐ ಟಿ ಐ + ೧ ವರ್ಷಅಪ್ರೆಂಟಿಸ್ ಶಿಪ್ ಅಥವಾ 3 ವರ್ಷ ರಾಷ್ಟ್ರೀಯ ಅಪ್ರೆಂಟಿಸ್ ಶಿಪ್ ಪ್ರಮಾಣೀಕರಣ ಕೋರ್ಸ್ | ಎಲೆಕ್ಟ್ರಾನಿಕ್ಸ್ಮೆಕ್ಯಾನಿಕ್ | ೨೬ | ಸಾಮಾನ್ಯ– ೧೮<br>ಇ.ಡಬ್ಲ್ಯು.ಎಸ್-೦೪<br>ಇ.ಹಿ.ವ–೧೩<br>ಪ.ಜಾ–೦೬<br>ಪ.ಪಂ.– ೦೨ | ವೇತನ ವರ್ಗ-IV / ಬಡ್ತಿ ಹಾದಿ- V ವೇತನ ಶ್ರೇಣಿ ರೂ.**21,500** -3%- ರೂ.**82,000**/- + ಸ್ವೀಕಾರಾರ್ಹ ಭತ್ಯೆಗಳು ಸಿ.ಟಿ.ಸಿ. ಅಂದಾಜು ೫.೩೬ ಲಕ್ಷಗಳು |
| | | | ಫಿಟ್ಟರ್ | ೧೨ | | |
| | | | ಎಲೆಕ್ಟ್ರಿಕಲ್ | ೦೩ | | |
| | | | ಡ್ರಾಫ್ಟ್ಸ್ ಮೆನ್ | ೦೨ | | |
| ೩ | ಕಿರಿಯ ಸಹಾಯಕ** | ಮಾನ್ಯತೆ ಪಡೆದ ಸಂಸ್ಥೆಯಿಂದ ಬಿ.ಕಾಂ/ಬಿಬಿಎಂ ನಲ್ಲಿ ಪದವಿ | ಬಿ.ಕಾಂ/ಬಿಬಿಎಂ | ೦೩ | ಸಾಮಾನ್ಯ– ೦೧<br>ಇ.ಡಬ್ಲ್ಯು.ಎಸ್–೦೧<br>ಪ.ಪಂ.–೦೧ | |

*ಇಂಜಿನಿಯರಿಂಗ್ ಸಹಾಯಕ ಶಿಕ್ಷಣಾರ್ಥಿಗಳು (ಇ.ಎ.ಟಿ)ಆರು ತಿಂಗಳ ಆರಂಭಿಕ ಅವಧಿಗೆ ತರಬೇತಿ ಪಡೆಯಲಿದ್ದು, ಈ ಅವಧಿಯಲ್ಲಿ ಅವರಿಗೆ ರೂ.೧೧,೦೦೦/-ರಂತೆ ಪ್ರತಿ ತಿಂಗಳು ಸ್ಟೈಪೆಂಡ್ ಪಾವತಿಸಲಾಗುವುದು.ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ನಂತರ ಮತ್ತು ಶ್ರೇಣೀಕರಣಪರೀಕ್ಷೆಯಲ್ಲಿ ಉತ್ತೀರ್ಣರಾದವರನ್ನುಮೇಲೆ ಸೂಚಿಸಲಾದ ನಿಯತ ವೇತನ ಶ್ರೇಣಿಯಲ್ಲಿನೇಮಕಮಾಡಲಾಗುವುದು.

**ಕಿರಿಯ ಸಹಾಯಕ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳನ್ನು ಬಿಇಎಲ್ ಕಾರ್ಪೊರೇಟ್ ಕಚೇರಿಯಲ್ಲಿ ನಿಯೋಜಿಸಲಾಗುವುದು.

## ೨.೦ ಅರ್ಹತೆ ಮಾನದಂಡ:

೨.೧ ರಾಷ್ಟ್ರೀಯತೆ : ಅಭ್ಯರ್ಥಿ ಭಾರತದ ಪ್ರಜೆಯಾಗಿರಬೇಕು

೨.೨ ಅ) ವಯೋಮಿತಿ(೦೧.೦೮.೨೦೨೩ ರಂತೆ) :

| ಕ್ರ.ಸಂ. | ಹುದ್ದೆ | ಗರಿಷ್ಠವಯೋಮಿತಿ (೦೧.೦೮.೨೦೨೩)ರಂತೆ |
|---|---|---|
| 1. | ಇಂಜಿನಿಯರಿಂಗ್ ಸಹಾಯಕಶಿಕ್ಷಣಾರ್ಥಿ(ಇ ಎ ಟಿ) | 28 ವರ್ಷ |
| 2. | ಟೆಕ್ನೀಶಿಯನ್ - ಸಿ | 28 ವರ್ಷ |
| 3 | ಕಿರಿಯ ಸಹಾಯಕ | 28 ವರ್ಷ |

ಆ) ಗರಿಷ್ಠ ವಯೋಮಿತಿಯಲ್ಲಿ ಸಡಿಲಿಕೆ:

| ಕ್ರ.ಸಂ. | ವರ್ಗ | ವಯೋಮಿತಿಯಲ್ಲಿ ಸಡಿಲಿಕೆ |
|---|---|---|
| 1 | ಇ.ಹಿ.ವ (ಮೇಲ್ಪದರ ವರ್ಗ ರಹಿತ) | 3 ವರ್ಷ |
| 2 | ಪ.ಜಾ./ ಪ.ಪಂ. | 5 ವರ್ಷ |
| 3 | ಕನಿಷ್ಠ 40% ಅಂಕವಿಕಲತೆಯುಳ್ಳ (ಪಿ.ಡಬ್ಲ್ಯುಡಿ) ವ್ಯಕ್ತಿ | 10 ವರ್ಷ |

ಇ).ಮೇಲೆಸೂಚಿಸಿದ ಗರಿಷ್ಠ ವಯೋಮಿತಿಯು ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ಅನ್ವಯವಾಗುತ್ತದೆ.

ಈ)ವಯೋಮಿತಿಯಲ್ಲಿ ಸಡಿಲಿಕೆಯನ್ನು ಬಯಸುವ ಅಭ್ಯರ್ಥಿಗಳು ಅಗತ್ಯ ಪ್ರಮಾಣ ಪತ್ರ(ಗಳ)ನ್ನು ಅರ್ಜಿಯೊಂದಿಗೆ ಲಗತ್ತಿಸಿ,ಪರಿಶೀಲನೆ ಪ್ರಕ್ರಿಯೆಯ ಹಂತದಲ್ಲಿ ಮೂಲ ಪ್ರತಿಯನ್ನು ಸಲ್ಲಿಸಬೇಕು.

ಉ)ಇ.ಡಬ್ಲ್ಯು.ಎಸ್/ ಜಾತಿ/ ಅಂಗವಿಕಲತೆ ಪ್ರಮಾಣ ಪತ್ರವು ಕಡ್ಡಾಯವಾಗಿ ಬಿ ಇ ಎಲ್ ಜಾಲತಾಣದಲ್ಲಿ ಲಭ್ಯವಿರುವ ನಮೂನೆಯಲೇ ಇರಬೇಕು, ವಿಫಲವಾದಲ್ಲಿ ಅಭ್ಯರ್ಥಿಗಳನ್ನು 'ಸಾಮಾನ್ಯ' ವರ್ಗದ ಅಡಿಯಲ್ಲಿ, ಅವರು ಸಾಮಾನ್ಯ ಅಭ್ಯರ್ಥಿಗಳಿಗೆ ನಿಗದಿಪಡಿಸಿದ ಇತರೆ ಎಲ್ಲ ಮಾನದಂಡಗಳನ್ನು ಪೂರೈಸುವ ಸಂದರ್ಭದಲ್ಲಿ ಮಾತ್ರ ಪರಿಗಣಿಸಲಾಗುತ್ತದೆ.

ಊ)ಕನಿಷ್ಠ 40% ಅಂಗವೈಕಲ್ಯ ಹೊಂದಿರುವ ವಿಕಲಾಂಗ (ಪಿ.ಡಬ್ಲ್ಯು.ಡಿ) ವರ್ಗಕ್ಕೆ ಸೇರಿದ ಅಭ್ಯರ್ಥಿಗಳಿಗೆವಯೋವಿತಿಯಲ್ಲಿ 10 ವರ್ಷಗಳುಸಡಿಲಿಕೆ ಸೇರಿದ್ದಂತೆ ಮೇಲೆ ತಿಳಿಸಿದ ಪ.ಜಾ./ಅ.ಬು./ ಇ.ಹಿ.ವ ದ ವಯೋಮಿತಿಯಸಡಿಲಿಕೆಯು ಕೂಡ ಅನ್ವಯವಾಗುತ್ತದೆ.

ಎ) ಮಾಜಿ ಸೈನಿಕರಿಗೆ ಸರ್ಕಾರ ಮಾರ್ಗದರ್ಶನಗಳುನುಸಾರ ವಯೋಮಿತಿಯಲ್ಲಿ ಸಡಿಲಿಕೆಯು ಅನ್ವಯವಾಗುವುದು.

**೩.೦ಶೈಕ್ಷಣಿಕ ವಿದ್ಯಾರ್ಹತೆ:**

**1. ಎಂಜಿನಿಯರಿಂಗ್ ಸಹಾಯಕ ಶಿಕ್ಷಣಾರ್ಥಿ-**

ಅ) ಅಭ್ಯರ್ಥಿಗಳು ಮಾನ್ಯತೆ ಪಡೆದ ಸಂಸ್ಥೆಯಿಂದ ಸಂಗತ ವಿಷಯದಲ್ಲಿ ಮೂರು ವರ್ಷಗಳ ಎಂಜಿನಿಯರಿಂಗ್ ನಲ್ಲಿ ಡಿಪ್ಲೊಮಾಪೂರ್ಣಗೊಳಿಸಿರಬೇಕು.

ಆ)ಅನಿವಾರ್ಯತೆ ಶೈಕ್ಷಣಿಕ ಪರೀಕ್ಷೆಯಲ್ಲಿಸಾಮಾನ್ಯ / ಇ.ಡಬ್ಲ್ಯುಎಸ್ / ಇ.ಹಿ.ವ ಅಭ್ಯರ್ಥಿಗಳು 60% ಒಟ್ಟಾರೆ ಅಂಕಗಳನ್ನು ಪಡೆದಿರಬೇಕು,ಪ.ಜಾ./ಪ.ಪಂ./ ಪಿ. ಡಬ್ಲ್ಯು.ಡಿ 50% ಒಟ್ಟಾರೆ ಅಂಕಗಳನ್ನು ಪಡೆದಿರಬೇಕು

ಇ) ದಿನಾಂಕ ೦೧.೦೮.೨೦೨೩ರಂತೆ ಸಾಮಾನ್ಯ / ಇ ಡಬ್ಲೂ್ಯ ಎಸ್ ಅಭ್ಯರ್ಥಿಗಳಿಗೆ ಕನಿಷ್ಠ ವಯೋಮಿತಿ ೧೮ ವರ್ಷಗಳು ಮತ್ತು ಗರಿಷ್ಠ ವಯೋಮಿತಿ ೨೮ ವರ್ಷಗಳಾಗಿರುತ್ತದೆ. ಇ.ಹಿ.ವ. ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿಯಲ್ಲಿ೩ ವರ್ಷಗಳು, ಪ.ಜಾ./ಪ.ಪಂ. ಅಭ್ಯರ್ಥಿಗಳಿಗೆ ೫ ವರ್ಷಗಳು ಮತ್ತು ಪಿಡಬ್ಲೂ್ಯಬಿಡಿ ಅಭ್ಯರ್ಥಿಗಳಿಗೆ ೧೦ ವರ್ಷಗಳ ಸಡಿಲಿಕೆಯನ್ನು ನೀಡಲಾಗುವುದು

**2. ತಂತ್ರಜ್ಞ 'ಸಿ'**

ಅ) ಮಾನ್ಯತೆ ಪಡೆದ ವಿಶ್ವವಿದ್ಯಾಲಯ / ಸಂಸ್ಥೆಯಿಂದ ಎಸ್ ಎಸ್ ಎಲ್ ಸಿ +ಸಂಗತ ವೃತ್ತಿಯಲ್ಲಿ ಐಟಿಐ ಪೂರ್ಣಗೊಳಿಸಿರಬೇಕು ಮತ್ತು ರಾಷ್ಟ್ರೀಯ ಅಪ್ರೆಂಟಿಸ್ ಶಿಪ್ ಪ್ರಮಾಣೀಕರಣದೊಂದಿಗೆ ಒಂದು ವರ್ಷ ಶಿಶ್ಯವೃತ್ತಿ ತರಬೇತಿ ಅಥವಾ ಎಸ್ ಎಸ್ ಎಲ್ ಸಿ +ಸಂಗತ ವೃತ್ತಿಯಲ್ಲಿ ೩ ವರ್ಷಗಳು ರಾಷ್ಟ್ರೀಯ ಅಪ್ರೆಂಟಿಸ್ ಶಿಪ್ ಪ್ರಮಾಣೀಕರಣ ಅಧ್ಯಯನ.

ಆ) ಅನಿವಾರ್ಯತೆ ಶೈಕ್ಷಣಿಕ ಪರೀಕ್ಷೆಯಲ್ಲಿ ಸಾಮಾನ್ಯ / ಇ.ಡಬ್ಲ್ಯುಎಸ್ / ಇ.ಹಿ.ವ ಅಭ್ಯರ್ಥಿಗಳು 60% ಒಟ್ಟಾರೆ ಅಂಕಗಳನ್ನು ಪಡೆದಿರಬೇಕು, ಪ.ಜಾ./ಪ.ಪಂ./ ಪಿ. ಡಬ್ಲ್ಯು.ಡಿ 50% ಒಟ್ಟಾರೆ ಅಂಕಗಳನ್ನು ಪಡೆದಿರಬೇಕು

ಇ)ದಿನಾಂಕ ೦೧.೦೮.೨೦೨೩ರಂತೆ ಸಾಮಾನ್ಯ / ಇ ಡಬ್ಲೂ್ಯ ಎಸ್ ಅಭ್ಯರ್ಥಿಗಳಿಗೆ ಕನಿಷ್ಠ ವಯೋಮಿತಿ ೧೮ ವರ್ಷಗಳು ಮತ್ತು ಗರಿಷ್ಠ ವಯೋಮಿತಿ ೨೮ ವರ್ಷಗಳಾಗಿರುತ್ತದೆ. ಇ.ಹಿ.ವ. ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿಯಲ್ಲಿ೩ ವರ್ಷಗಳು, ಪ.ಜಾ./ಪ.ಪಂ. ಅಭ್ಯರ್ಥಿಗಳಿಗೆ ೫ ವರ್ಷಗಳು ಮತ್ತು ಪಿಡಬ್ಲೂ್ಯಬಿಡಿ ಅಭ್ಯರ್ಥಿಗಳಿಗೆ ೧೦ ವರ್ಷಗಳ ಸಡಿಲಿಕೆಯನ್ನು ನೀಡಲಾಗುವುದು

**ಕಿರಿಯ ಸಹಾಯಕ-**

ಅ) ಅಭ್ಯರ್ಥಿಗಳು ಯಾವುದೇ ಮಾನ್ಯತೆ ಪಡೆದ ವಿಶ್ವವಿದ್ಯಾಲಯ / ಸಂಸ್ಥೆಯಿಂದ ಮೂರು ವರ್ಷಗಳ ಬಿ.ಕಾಂ./ಬಿಬಿಎಂ ಪೂರ್ಣಗೊಳಿಸಿರಬೇಕು.

ಆ) ಅನಿವಾರ್ಯತೆ ಶೈಕ್ಷಣಿಕ ಪರೀಕ್ಷೆಯಲ್ಲಿ ಸಾಮಾನ್ಯ / ಇ.ಡಬ್ಲ್ಯುಎಸ್ / ಇ.ಹಿ.ವ ಅಭ್ಯರ್ಥಿಗಳು 60% ಒಟ್ಟಾರೆ ಅಂಕಗಳನ್ನು ಪಡೆದಿರಬೇಕು, ಪ.ಜಾ./ಪ.ಪಂ./ ಪಿ. ಡಬ್ಲ್ಯು.ಡಿ 50% ಒಟ್ಟಾರೆ ಅಂಕಗಳನ್ನು ಪಡೆದಿರಬೇಕು

ಇ)ದಿನಾಂಕ ೦೧.೦೮.೨೦೨೩ರಂತೆ ಸಾಮಾನ್ಯ / ಇ ಡಬ್ಲ್ಯೂ ಎಸ್ ಅಭ್ಯರ್ಥಿಗಳಿಗೆ ಕನಿಷ್ಠ ವಯೋಮಿತಿ ೧೮ ವರ್ಷಗಳು ಮತ್ತು ಗರಿಷ್ಠ ವಯೋಮಿತಿ ೨೮ ವರ್ಷಗಳಾಗಿರುತ್ತದೆ. ಇ.ಹಿ.ವ. ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿಯಲ್ಲಿ೩ ವರ್ಷಗಳು, ಪ.ಜಾ./ಪ.ಪಂ. ಅಭ್ಯರ್ಥಿಗಳಿಗೆ ೫ ವರ್ಷಗಳು ಮತ್ತು ಪಿಡಬ್ಲ್ಯೂಬಿಡಿ ಅಭ್ಯರ್ಥಿಗಳಿಗೆ ೧೦ ವರ್ಷಗಳ ಸಡಿಲಿಕೆಯನ್ನು ನೀಡಲಾಗುವುದು

**೪.೦ಅನುಭವ**-ಶೂನ್ಯ

**೫.೦ಕರ್ನಾಟಕ ಉದ್ಯೋಗ ವಿನಿಮಯ ನೋಂದಣೀಕರಣ -**

ಎಂಜಿನಿಯರಿಂಗ್ ಸಹಾಯಕ ಶಿಕ್ಷಣಾರ್ಥಿ,ತಂತ್ರಜ್ಞ 'ಸಿ'ಮತ್ತು ಕಿರಿಯ ಸಹಾಯಕ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ಕರ್ನಾಟಕದ ಉದ್ಯೋಗ ವಿನಿಮಯದಲ್ಲಿನ ಮಾನ್ಯ ಉದ್ಯೋಗ ನೋಂದಣಿ ಕಾರ್ಡ್ ಅಗತ್ಯ. ಉದ್ಯೋಗ ವಿನಿಮಯ ನೋಂದಣಿಯು ೦೫.೦೯.೨೦೨೩ ರಂದು ಮಾನ್ಯ ಮತ್ತು ಸಕ್ರಿಯ ಸ್ಥಿತಿಯಲ್ಲಿರತಕ್ಕದ್ದು. ಅವಧಿ ಮೀರಿದ / ಸಕ್ರಿಯ ಸ್ಥಿತಿಯಲ್ಲಿ ಇಲ್ಲದ ಉದ್ಯೋಗ ವಿನಿಮಯ ನೋಂದಣಿ ಕಾರ್ಡನ್ನು ಪರಿಗಣಿಸಲಾಗುವುದಿಲ್ಲ.

**೬.೦ಆಯ್ಕೆಯ ವಿಧಾನ:**

ಮಾನದಂಡಗಳನ್ನು ಪೂರೈಸುವ ಅಭ್ಯರ್ಥಿಗಳನ್ನು ಆಯ್ಕೆ ಪ್ರಕ್ರಿಯೆಯ ಲಘು ಪಟ್ಟಿಯಲ್ಲಿ ಸೇರಿಸಲಾಗುವುದು.ಅರ್ಹ ಅಭ್ಯರ್ಥಿಗಳು ಈ ಕೆಳಗಿನವುಗಳನ್ನು ಒಳಗೊಂಡಿರುವ 150 ಅಂಕಗಳಿಗೆ ಲಿಖಿತ ಪರೀಕ್ಷೆಗೆ ಹಾಜರಾಗಬೇಕಾಗುತ್ತದೆ.

**ಭಾಗ 1: ಸಾಮಾನ್ಯ ಆಪ್ಟಿಟ್ಯೂಡ್:**50 ಅಂಕಗಳು - ಸಾಮಾನ್ಯ ಮಾನಸಿಕ ಸಾಮರ್ಥ್ಯ ಮತ್ತು ಅಭಿರುಚಿಯಿಂದ ತಾರ್ಕಿಕ ಸಮರ್ಥನೆಯವರೆಗು,ವಿಶ್ಲೇಷನಾತ್ಮಕ,ವ್ಯಾಪಕ ಸಾಮರ್ಥ್ಯ,ಮೂಲ ಸಂಖ್ಯಾಶಾಸ್ತ್ರ, ದತ್ತಾಂಶ ವ್ಯಾಖ್ಯಾನ ಕೌಶಲ್ಯ ಮತ್ತು ಸಾಮಾನ್ಯ ಜ್ಞಾನವನ್ನು ಒಳಗೊಂಡಿರುತ್ತದೆ.

**ಭಾಗ 2: ತಾಂತ್ರಿಕ ಆಪ್ಟಿಟ್ಯೂಡ್:**100 ಅಂಕಗಳು - ತಾಂತ್ರಿಕ /ವೃತ್ತಿಪರ ಜ್ಞಾನ ಪರೀಕ್ಷೆ ಜೊತೆಗೆ ಆಯಾ ವಿಷಯದಿಂದ ನಿರ್ದಿಷ್ಟ100 ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.

**ಕನಿಷ್ಠ ಅರ್ಹತಾ ಅಂಕಗಳು ಹೀಗಿವೆ:**

| ವರ್ಗ | ಶೇಕಡ |
|---|---|
| ಸಾಮಾನ್ಯ / ಇ.ಹಿ.ವ./ ಇ. ಡಬ್ಲ್ಯು.ಎಸ್ | ಭಾಗ 1 ಮತ್ತು ಭಾಗ 2 ಎರಡರಲ್ಲೂ ಪ್ರತ್ಯೇಕವಾಗಿ 35% |
| ಪ.ಜಾ./ಪ.ಪಂ. / ಪಿ.ಡಬ್ಲ್ಯುಡಿ | ಭಾಗ 1 ಮತ್ತು ಭಾಗ 2 ಎರಡರಲ್ಲೂ ಪ್ರತ್ಯೇಕವಾಗಿ 30% |

೭.೦ **ವೇತನ ಮತ್ತು ಭತ್ಯೆಗಳು:** ಆಯ್ದ ಅಭ್ಯರ್ಥಿಗಳನ್ನು ೧-ಹುದ್ದೆಗಳು,ಕಾಲಮ್ ೮ರಲ್ಲಿ ಉಲ್ಲೇಖಿಸಿರುವವೇತನ ಶ್ರೇಣಿಯಲ್ಲಿ ಸೇರಿಸಲಾಗುವುದು. ಇಂಜಿನಿಯರಿಂಗ್ ಸಹಾಯಕ ಶಿಕ್ಷಣಾರ್ಥಿ (ಇ.ಎ.ಟಿ ) ಆರು ತಿಂಗಳ ಪ್ರಾರಂಭಿಕಅವಧಿಗೆ ತರಬೇತಿ ಪಡೆಯಲಿದ್ದು,ಈ ಅವಧಿಯಲ್ಲಿ ಅವರಿಗೆ ರೂ.೧೦,೦೦೦ರಂತೆ ಪ್ರತಿ ತಿಂಗಳು ಸ್ಟೈಪೆಂಡ್ ಪಾವತಿಸಲಾಗುವುದು.ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ನಂತರ ಮತ್ತು ಶ್ರೇಣೀಕರಣಪರೀಕ್ಷೆಯಲ್ಲಿ ಉತ್ತೀರ್ಣರಾದ ನಂತರ, ಮೇಲೆ ಸೂಚಿಸಲಾದ ನಿಯತ ವೇತನ ಶ್ರೇಣಿಯಲ್ಲಿನೇಮಕ ಮಾಡಲಾಗುವುದು.

ಮೂಲ ವೇತನದಲ್ಲಿ, ಇತರ ಭತ್ಯೆಗಳಾದ, ತುಟ್ಟಿ ಭತ್ಯೆ, ಮನೆ ಬಾಡಿಗೆ ಭತ್ಯೆಗಳನ್ನು ಶೇ.೩೦%ರಷ್ಟು ವಾರ್ಷಿಕ ವೇತನದಲ್ಲಿ ನೀಡಲಾಗುವುದು, ಮತ್ತು ಮತ್ತು ವೈದ್ಯಕೀಯ ಖರ್ಚು, ಸಮೂಹ ವಿಮೆ, ಭವಿಷ್ಯನಿಧಿ, ಪೆಂಷನ್, ಗ್ರಾಚುಟಿ (ಉಪದಾನ) ಇತ್ಯಾದಿ ಕಂಪನಿಯ ನಿಯಮದಂತೆ ಪ್ಯಾಕೇಜ್ ನಲ್ಲಿ ಪ್ರತಿಫಲ ನೀಡಲಾಗುವುದು.

೮.೦ **ಅರ್ಜಿ ಶುಲ್ಕ:**

ಅ. ಸಾಮಾನ್ಯ/ ಇ.ಹಿ.ವ./ ಇ.ಡಬ್ಲ್ಯು.ಎಸ್. ವರ್ಗಕ್ಕೆ ಸೇರಿದ ಅಭ್ಯರ್ಥಿಗಳು, ರೂ.250+18%=ರೂ.295ಅರ್ಜಿ ಶುಲ್ಕವನ್ನು ಪಾವತಿಸತಕ್ಕದ್ದು.

1. ಪ.ಜಾ./ಪ.ಪಂ./ ಪಿ. ಡಬ್ಲ್ಯುಡಿಮತ್ತು ಮಾಜಿ ಸೈನಿಕರಿಗೆ ಅರ್ಜಿ ಶುಲ್ಕ ಪಾವತಿಸುವುದರಿಂದ ವಿನಾಯಿತಿ ನೀಡಲಾಗಿದೆ
2. ಅರ್ಜಿ ಶುಲ್ಕವನ್ನು ಮರುಪಾವತಿಸಲಾಗುವುದಿಲ್ಲ.
3. ಅರ್ಜಿ ಶುಲ್ಕವನ್ನು ಕಳುಹಿಸುವ ಮೊದಲು ಅಭ್ಯರ್ಥಿಗಳು ಎಲ್ಲಾ ಸೂಚನೆಗಳು ಮತ್ತು ಅರ್ಹತಾ ಮಾನದಂಡಗಳನ್ನು ಎಚ್ಚರಿಕೆಯಿಂದ ಓದಿ ಅರ್ಥ ಮಾಡಿಕೊಳ್ಳ ಬೇಕು.
4. ಅರ್ಜಿ ಶುಲ್ಕವನ್ನು ಆನ್‌ಲೈನ್‌ಮೋಡ್ ಅಂದರೆ ಎಸ್.ಬಿ.ಐ. ಕಲೆಕ್ಟ್ ಮುಖಾಂತರ ಕಳುಹಿಸಬೇಕು.

***ಪಾವತಿ ಮಾಡಲು ಸೂಚನೆಗಳು:***

ಬಿಇಎಲ್ ವೆಬ್ ಸೈಟ್ ನಲ್ಲಿ ಲಭ್ಯವಿರುವ ಪೇಮೆಂಟ್ ಲಿಂಕ್ ನ ಮೇಲೆ ಕ್ಲಿಕ್ ಮಾಡಿರಿ ಅಥವಾ https://www.onlinesbi.sbi/sbicollect/icollecthome.htm?corpID=14842 ಲಿಂಕ್ ನ ಮೇಲೆ ಕ್ಲಿಕ್ ಮಾಡಿರಿ.

1. www.onlinesbi.comಗೆ ತೆರಳಿಮತ್ತುಆಯ್ಕೆಮಾಡಿ: - ಸ್ಟೇಟ್ ಬ್ಯಾಂಕ್ ಕಲೆಕ್ಟ್
2. ನಿಯಮಗಳು ಮತ್ತು ಷರತ್ತುಗಳನ್ನು ಅಂಗೀಕರಿಸಿ ನಂತರ ಪ್ರೊಸೀಡ್ ಅನ್ನು ಕ್ಲಿಕ್ ಮಾಡಿ.
3. ನಿಗಮದ ರಾಜ್ಯ / ಸಂಸ್ಥೆಯನ್ನು ಆಯ್ಕೆ ಮಾಡಿ : - ಅಖಿಲ ಭಾರತ.
4. ಪಿಎಸ್ ಯು ಆಯ್ಕೆ ಮಾಡಿ - ಸಾರ್ವಜನಿಕ ಉದ್ಯಮ -ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಮತ್ತುSUBMIT ಗುಂಡಿಯನ್ನು ಒತ್ತಿ=>Go ಗುಂಡಿಯನ್ನು ಒತ್ತಿ.
5. .ಶುಲ್ಕಪಾವತಿಸುವವರ್ಗವನ್ನುಆಯ್ಕೆಮಾಡಿ: - (ಹುದ್ದೆಯ ಹೆಸರು-ಬೆಂ.ಸಂ.ಕ್ಕೆಅಧಿಕಾರರೇತರರ ನೇಮಕಾತಿ )
6. ಮೇಲೆ ವಿವರಿಸಿದಂತೆ ಪಾವತಿಯನ್ನು ಪೂರ್ಣಗೊಳಿಸಿ.
7. ಪಾವತಿ ರಶೀದಿಯನ್ನು ಸೇವ್ ಮಾಡಿ / ಸ್ಕ್ರೀನ್ ಶಾಟ್ ಮಾಡಿ ಮತ್ತು ಅದರ ಮುದ್ರಿತ ಪ್ರತಿಯನ್ನು ಅರ್ಜಿಯೊಂದಿಗೆ ಲಗತ್ತಿಸಿ.
8. ಜಾಹೀರಾತಿನೊಂದಿಗೆ ಸ್ಕ್ರೀನ್ ಶಾಟ್‌ಗಳ ಜೊತೆಗೆ ವಿವರವಾದ ಸೂಚನೆಗಳನ್ನು ನೀಡಲಾಗಿದೆ.

ಅಭ್ಯರ್ಥಿಗಳು ಪಾವತಿ ಮಾಡಿದ ನಂತರ ಪ್ರದರ್ಶಿತವಾಗುವ"SBI Collect Reference Number" ಅನ್ನು ಅರ್ಜಿಯಲ್ಲಿ ಉಲ್ಲೇಖಿಸಬೇಕು. ಪಾವತಿಸಿದ ಸ್ಥಿತಿಯನ್ನು ಬಿಇಎಲ್ ಮೂಲಕ ಸರಿಹೊಂದಿಸಿದ ನಂತರ ಅರ್ಜಿಯಲ್ಲಿ ದೃಢೀಕರಿಸಲಾಗುವುದು.

೯.೦ **ಅರ್ಜಿ ಸಲ್ಲಿಸುವುದು ಹೇಗೆ:**

(ಅ) ಮೇಲೆ ತಿಳಿಸಲಾದ ಮಾನದಂಡವನ್ನು ಪೂರೈಸುವ ಅಭ್ಯರ್ಥಿಗಳು ಬಿಇಎಲ್ ವೆಬ್ ಸೈಟ್ ನಲ್ಲಿ ಒದಗಿಸಲಾದ ಆನ್ ಲಿನ್ ಲಿಂಕ್ https://jobapply.in/BEL2023JalahaliEATTECH/ ನ ಮೂಲಕ ಅರ್ಜಿ ನಮೂನೆಯನ್ನು ಭರ್ತಿ ಮಾಡಬಹುದಾಗಿದೆ. ಬಿಇಎಲ್ ವೆಬ್ ಸೈಟ್ ನಲ್ಲಿಯೂ ಸಹ ಆನ್ ಲೈನ್ ಲಿಂಕ್ ಅನ್ನು ಒದಗಿಸಲಾಗಿದೆ.

ಅರ್ಜಿಯನ್ನು ಭರ್ತಿ ಮಾಡುವ ಮುನ್ನ ಆನ್ ಲೈನ್ ಅರ್ಜಿಯನ್ನು ಹೇಗೆ ಭರ್ತಿ ಮಾಡಬೇಕು ಎಂಬ ಸೂಚನೆಗಳನ್ನು ದಯವಿಟ್ಟು ಗಮನಿಸತಕ್ಕದ್ದು. ಮುದ್ರಿತ / ಕಾಗದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ

೧೦.೦ **ಸಾಮಾನ್ಯ ಸೂಚನೆಗಳು:**

1. ಹುದ್ದೆಗೆ ಮೇಲಿನ ಎಲ್ಲಾ ಅಹರ್ತಾ ಮಾನದಂಡಗಳನ್ನು ಪೂರೈಸುವ ಅಭ್ಯರ್ಥಿಗಳನ್ನು ಮಾತ್ರ ಲಿಖಿತ ಪರೀಕ್ಷೆಗೆ ಕರೆಯಲಾಗುವುದು.ಆದಾಗ್ಯೂ ಅರ್ಜಿದಾರರ ಉಮೇದುವಾರಿಕೆಯು ತಾತ್ಕಾಲಿಕವಾಗಿರುತ್ತದೆ ಮತ್ತು ಅದನ್ನು ಅವನು/ಅವಳು ಸಲ್ಲಿಸಿದ ಪ್ರಮಾಣ ಪತ್ರಗಳು/ಪ್ರಶಸ್ತಿಪತ್ರಗಳ ಪರೀಶಿಲನೆಗೆ ಒಳಪಟ್ಟಿರುತ್ತದೆ.
2. ದಯವಿಟ್ಟು ಗಮನಿಸಿ ಲಿಖಿತ ಪರೀಕ್ಷೆಗೆ ತಾತ್ಕಾಲಿಕವಾಗಿ ಅರ್ಹ ಅಭ್ಯರ್ಥಿಗಳಿಗೆ ಪ್ರವೇಶ ಪತ್ರವನ್ನು ವೆಬ್-ಸೈಟ್ ನಿಂದಡೌನ್-ಲೋಡ್ ಮಾಡಿಕೊಳ್ಳಬಹುದು.ಪ್ರವೇಶ ಪತ್ರವನ್ನು ಅಂಚೆ ಮೂಲಕ ಕಳುಹಿಸಲಾಗುವುದಿಲ್ಲಎಂಬುದನ್ನು ಗಮನಿಸತಕ್ಕದ್ದು.

3. ಸರ್ಕಾರಿ / ಅರೆ ಸರ್ಕಾರಿ / ಸಾರ್ವಜನಿಕ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿರುವ ಅಭ್ಯರ್ಥಿಗಳು **"ಆಕ್ಷೇಪಣೆರಹಿತ ಪ್ರಮಾಣಪತ್ರ"**ವನ್ನು ದಾಖಲೆಗಳ ಪರಿಶೀಲನೆ ಸಮಯದಲ್ಲಿ ( ಕೌಶಲ ಪರೀಕ್ಷೆ / ಭೌತಿಕ ಸಾಮರ್ಥ್ಯ ಪರೀಕ್ಷೆ / ಲಿಖಿತ ಪರೀಕ್ಷೆ / ನೇರ ಸಂದರ್ಶನ ) ಸಲ್ಲಿಸತಕ್ಕದ್ದು. ಒಂದು ವೇಳೆ ಅಭ್ಯರ್ಥಿಯು ಇದನ್ನು ಸಲ್ಲಿಸಲು ವಿಫಲವಾದಲ್ಲಿ ಆತ / ಆಕೆಯ ಅಭ್ಯರ್ಥಿತನವು ಅನರ್ಹಗೊಳಿಸಲಾಗುವುದು.

4. ಜಾಹೀರಾತಿನಲ್ಲಿ ನೀಡಿದ ವಿದ್ಯಾರ್ಹತೆಯನ್ನು ಮಾನ್ಯತೆ ಪಡೆದ ಸಂಸ್ಥೆ / ಮಂಡಲಿ / ಪರಿಷತ್ತು / ವಿಶ್ವವಿದ್ಯಲಯದಿಂದ ಹೊಂದಿರತಕ್ಕದ್ದು. ಪದವಿ /ಡಿಪ್ಲೊಮಾ ಪಡೆಯುವಾಗ ಎಲ್ಲೆಲ್ಲಿ ಸಿಜಿಪಿಎ/ಒಜಿಪಿಎ/ಡಿಜಿಪಿಎ ಅಥವಾ ಅಂತಿಮ / ಘಟಿಕೋತ್ಸವಪ್ರಮಾಣಪತ್ರದಲ್ಲಿ ಲೆಟರ್ ಗ್ರೇಡ್ ಉಲ್ಲೇಖವಾಗಿದೆಯೋ ಅದರ ಸಮಾನಾಂತರ ಶೇಕಡವಾರು ಅಂಕಗಳನ್ನು ವಿಶ್ವವಿದ್ಯಾಲಯ/ ಸಂಸ್ಥೆಯು ಅಳವಡಿಸಿಕೊಂಡ ನಿಯಮಗಳನುಸಾರವಾಗಿ ಅರ್ಜಿ ನಮೂನೆಯಲ್ಲಿ ಅದನ್ನು ಸೂಚಿಸತಕ್ಕದ್ದು. ಸಿಜಿಪಿಎ/ಒಜಿಪಿಎ/ಡಿಜಿಪಿಎ ನಿಂದ ಶೇಕಡವಾರುವಾಗಿ ಪರಿವರ್ತನೆ ಮಾಡಲು ವಿಶ್ವವಿದ್ಯಾಲಯ/ ಸಂಸ್ಥೆಯು ಅಳವಡಿಸಿಕೊಂಡ ನಿಯಮಗಳ ಸಾಕ್ಷ್ಯವನ್ನು ಪರಿಶೀಲನೆಯ ಸಮಯದಲ್ಲಿ ಪ್ರಸ್ತುತಪಡಿಸತಕ್ಕದ್ದು.

5. ಅಭ್ಯರ್ಥಿಗಳು ಊರ್ಜಿತ ಫೋಟೊ ಗುರುತಿನ ಸಾಕ್ಷ್ಯವನ್ನು ಕೌಶಲ ಪರೀಕ್ಷೆ / ಲಿಖಿತಪರೀಕ್ಷೆ ಗೆ ಹಾಜರಾಗುವಾಗ ಪ್ರಸ್ತುತಪಡಿಸಬೇಕು.

6.ಅಭ್ಯರ್ಥಿಯು ಆರೋಗ್ಯವಂತರಾಗಿರತಕ್ಕದ್ದು. ಆರೋಗ್ಯ ಮಾನಕಗಳಲ್ಲಿ ಯಾವುದೇ ಸಡಿಲಿಕೆಯನ್ನು ನೀಡಲಾಗುವುದಿಲ್ಲ. ಆಯ್ಕೆಯಾದ ಅಭ್ಯರ್ಥಿಗಳ ನೇಮಕಾತಿಯು ನಿಯಮಗಳು ಮತ್ತು ವೈದ್ಯಕೀಯ ಆರೋಗ್ಯದ ಮಾನಕದ ಅನುಸಾರವಾಗಿ ನಿರ್ವಹಿಸುವ ಪೂರ್ವ ನೇಮಕಾತಿ ವೈದ್ಯಕೀಯ ಪರೀಕ್ಷೆಯಲ್ಲಿ ವೈದ್ಯಕೀಯವಾಗಿ ಆರೋಗ್ಯವಂತ ಎಂಬುದುರ ಮೇಲೆ ಅವಲಂಬಿತವಾಗಿರುತ್ತಾರೆ.

7.ನಗರದಹೊರಗಿರುವ ಎಲ್ಲ ಪ.ಜಾ/ಪ.ಪಂ./ಪಿ.ಡಬ್ಲ್ಯು.ಡಿ ಮತ್ತು ಮಾಜಿ ಸೈನಿಕ ಅಭ್ಯರ್ಥಿಗಳನ್ನು ಲಿಖಿತ ಪರೀಕ್ಷೆಗೆ ಹಾಜರಾಗಲು ಪ್ರವಾಸ ಭತ್ಯೆಯನ್ನು ತಮ್ಮ ಅಂಚೆ ವಿಳಾಸ / ಭಾರತದಲ್ಲಿ ಸೇವೆ ಸಲ್ಲಿಸುತ್ತಿರುವ ಕಾರ್ಯ ಸ್ಥಳದಿಂದ ಬರುವ/ತೆರಳುವ ಪ್ರವಾಸ ಮಾರ್ಗದ ಹತ್ತಿರ ಮಾರ್ಗಕ್ಕೆ (ಸ್ಲೀಪರ್ ಶ್ರೇಣಿ) ಪ್ರವಾಸ ಮಾಡಿದ ಟಿಕೆಟ್ ಗಳನ್ನು ಪ್ರಸ್ತುತಪಡಿಸಿದ್ದಲ್ಲಿ ಅದನ್ನು ಮರುಪಾವತಿಸಲಾಗುವುದು. ಅಭ್ಯರ್ಥಿಗಳಿಂದ ಸಲ್ಲಿಸಲಾದ ಸಂಬಂಧಿತ ದಾಖಲೆಗಳ ಪರಿಶೀಲನೆ ನಂತರ ಪ್ರವಾಸ ಭತ್ಯೆಯನ್ನು ಮರು ಪಾವತಿ ಮಾಡುವ ಸಲುವಾಗಿ ಬ್ಯಾಂಕ್ ಖಾತೆ ವಿವರಗಳು,ಪಯಣ ಮಾಡಲಾದ ರೈಲ್ / ಬಸ್ ಟಿಕೆಟ್ ಮತ್ತು ಸ್ವಯಂ ಪ್ರಮಾಣೀಕೃತ ಪ.ಜಾ./ಪ.ಪಂ./ಪಿಡಬ್ಲ್ಯೂಡಿ ಪ್ರಮಾಣಪತ್ರವನ್ನು ಲಿಖಿತ ಪರೀಕ್ಷೆಯ ಸಮಯದಲ್ಲಿ ಒದಗಿಸಬೇಕೆಂಬುದನ್ನುಅಭ್ಯರ್ಥಿಗಳು ಗಮನಿಸತಕ್ಕದ್ದು. ಪ್ರವಾಸಕ್ಕೆ ಟಿ.ಎ. ಕೋರಿಕೆಯನ್ನು ಸಲ್ಲಿಸುವ ಪ.ಜಾ./ಪ.ಪಂ./ಪಿಡಬ್ಲ್ಯೂಡಿ ಮತ್ತುಮಾಜಿ ಸೈನಿಕರುಜಾತಿ / ವಿಕಾಲಂಗತೆ ಪ್ರಮಾಣಪತ್ರದ ಮೂಲ ಪ್ರತಿಯನ್ನು ಸಲ್ಲಿಸತಕ್ಕದ್ದು. ಇ ಸಿ ಎಸ್ ಮೂಲಕ ನಂತರದ ದಿನಾಂಕದಲ್ಲಿ ಮರುಪಾವತಿಯನ್ನು ಮಾಡಲಾಗುವುದು.

8. ಸ್ಥಳೀಯ ಪ್ರಯಾಣ ಖರ್ಚನ್ನು ಅಭ್ಯರ್ಥಿಗಳೇ ಭರಿಸತಕ್ಕದ್ದು.

9. ಆನ್ ಲೈನ ಅರ್ಜಿಯಲ್ಲಿ ಒಮ್ಮೆ ಘೋಷಿಸಿದ ವರ್ಗ (ಸಾಮಾನ್ಯ/ ಪಜಾ/ಪ ಪಂ/ಇ.ಹಿ.ವರ್ಗ/ಇ. ಡಬ್ಲ್ಯು.ಎಸ್ ಮತ್ತು ಮಾಜಿ ಸೈಕಿಕರು) ಕ್ಕೆ ಸಂಬಂಧ ಪಟ್ಟಂತೆ ಬದಲಾವಣೆಗೆ ಕೋರಲು ಅವಕಾಶ ಇರುವುದಿಲ್ಲ.

10.**ಇ.ಹಿ.ವ ಮೇಲ್ಪದರ (ಎನ್ ಸಿ ಎಲ್) ಅಭ್ಯರ್ಥಿಗಳಿಗೆ ಮೀಸಲಾತಿ / ಸಡಿಲಿಕೆ / ರಿಯಾಯಿತಿಯು ದಸ್ತಾವೇಜು** ಪರಿಶೀಲನೆಯ ಸಮಯದಲ್ಲಿಸಕ್ಷಮಅಧಿಕಾರಿಯವರಿಂದಜಾರಿಯಾದ **"** ಕೇಂದ್ರಸರ್ಕಾರಹುದ್ದೆಗಳಲ್ಲಿನೇಮಕಾತಿ **" ****ಗಾಗಿಭಾರತ ಸರ್ಕಾರದಿಂದನಿರ್ಧರಿಸಿದನಮೂನೆಯಲ್ಲಿಘೋಷಣೆಯಜೊತೆಗೆಪ್ರಮಾಣೀಕೃತಇ.ಹಿ.ವ(ಎನ್ಸಿಎಲ್)ಪ್ರಮಾಣಪತ್ರದ ಪ್ರತಿಯನ್ನುಸಲ್ಲಿಸುವುದರಮೇಲೆಅವಲಂಬಿತವಾಗಿರುತ್ತದೆ.ಆದಾಯಪ್ರಮಾಣಪತ್ರವನ್ನುಇ.ಹಿ.ವ ಪ್ರಮಾಣಪತ್ರವನ್ನಾಗಿ ಪರಿಗಣಿಸ ಲಾಗುವುದಿಲ್ಲ.

11.ಸಕ್ಷಮ ಪ್ರಾಧಿಕಾರಿಯವರಿಂದ 2022-23 ನೇ ವರ್ಷಕ್ಕೆ ಜಾರಿಯಾದ ಇ.ಡಬ್ಲ್ಯು.ಎಸ್ ಪ್ರಮಾಣ ಪತ್ರವನ್ನು ***ಪರಿಗಣಿಸಲಾಗುವುದು.(ವೆಬ್ ಸೈಟ್ www.bel-india.in ನಲ್ಲಿ ನಿರ್ಧಾರಿತ ಪ್ರಪತ್ರ ಉಪಲಬ್ಧವಿದೆ).

12.ಮಾಜಿ ಸೈನಿಕರಿಗೆ ಸರ್ಕಾರ ಮಾರ್ಗದರ್ಶನಗಳುನುಸಾರ ವಯೋಮಿತಿಯಲ್ಲಿ ಸಡಿಲಿಕೆಯು ಅನ್ವಯವಾಗುವುದು.

13.ಯಾವುದೇ ಅಭ್ಯರ್ಥಿಯು ತನ್ನ ಹಿಂದಿನ ಉದ್ಯೋಗದಾತರ ಬಳಿ ಕಾನೂನು ವ್ಯಾಜ್ಯವಿದ್ದಲ್ಲಿ ಆನ್ ಲೈನ್ ಅರ್ಜಿಯಲ್ಲಿ ಅದನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು.

14.ಅಪೂರ್ಣವಾದ ಮತ್ತು ನಿಗದಿತ ಪ್ರಪತ್ರದಲ್ಲಿ ಇಲ್ಲದ, ಅಗತ್ಯ ಅಡಕಗಳನ್ನು ಆನ್ ಲೈನ್ ಅರ್ಜಿ ನಮೂನೆಗಳನ್ನು ಒಮ್ಮೆಲೆ ತಿರಸ್ಕರಿಸಲಾಗುವುದು ಮತ್ತು ಈ ಸಂಬಂಧವಾಗಿ ಯಾವುದೇ ಪತ್ರ ವ್ಯವಹಾರವನ್ನು ಅಂಗೀಕರಿಸಲಾಗುವುದಿಲ್ಲ.

15.ಆನ್ ಲೈನ್ ಅರ್ಜಿ ನಮೂನೆಯಲ್ಲಿ ಸಕ್ರಿಯ ಹಾಗೂ ಮಾನ್ಯ ಇ-ಮೇಲ್ ಐ ಡಿ ನಮೂದಿಸುವುದು ಕಡ್ಡಾಯವಾಗಿರುತ್ತದೆ.ಲಿಖಿತ ಪರೀಕ್ಷೆ/ ನೇರ ಸಂದರ್ಶನಕ್ಕೆ ಸಂಬಂಧಪಟ್ಟ ಎಲ್ಲಾ ಮಾಹಿತಿಗಳನ್ನು ಅಭ್ಯರ್ಥಿಗಳಿಂದ ನೀಡಲ್ಪಟ್ಟ ಇ-ಮೇಲ್ ಗೆ ಕಳುಹಿಸಲಾಗುತ್ತದೆ.ಯಾವುದೇ ಸಂದರ್ಭದಲ್ಲಿ ಅಭ್ಯರ್ಥಿಗಳು ಇತರೆ ವ್ಯಕ್ತಿಯ ಇ-ಮೇಲ್ ಅನ್ನು ನೀಡಬಾರದು. ಇ-ಮೇಲ್ ಬೌನ್ಸ್ಆದರೆ ಬಿ.ಇ.ಎಲ್ ಜವಾಬ್ದಾರಿಯಲ್ಲ.

16. ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚು ಅರ್ಜಿಯನ್ನು ಸಲ್ಲಿಸಬಾರದು. ಅನೇಕ ಅರ್ಜಿಗಳನ್ನು ಸಲ್ಲಿಸಿದ ಸಂದರ್ಭದಲ್ಲಿ ಕೇವಲಕೊನೆಯಮಾನ್ಯ (ಪೂರ್ಣ) ಅರ್ಜಿಯನ್ನು ಪರಿಗಣಿಸಲಾಗುವುದು ಮತ್ತು ಇತರೆ ಅರ್ಜಿಗಳಿಗೆ ಸಂದಾಯವಾದ ಶುಲ್ಕವನ್ನು ಮುಟ್ಟುಗೋಲುಹಾಕಲಾಗುವುದು.

17. OMR ಶೀಟ್ ಗಳ ಮರುಪರೀಶೀಲನೆ/ಮರುಮೌಲ್ಯಮಾಪನಕ್ಕೆ ಯಾವುದೇ ಅವಕಶಾವಿಲ್ಲ.

18.ಪರೀಕ್ಷಾ ಕೊಠಡಿಯಲ್ಲಿ ಮೊಬೈಲ್ ಫೋನ್/ಐ ಪ್ಯಾಡ್/ಐ ಪೋಡ್/ ಟ್ಯಾಬ್ಲೆಟ್ಸ್/ ಕ್ಯಾಲ್ಕ್ಯುಲೇಟರ್ ನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ, ಅಭ್ಯರ್ಥಿಗಳು ಒಂದು ವೇಳೆ ಇವುಗಳನ್ನು ಮತ್ತು ಯಾವುದೇ ಇಲೆಕ್ಟ್ರಾನಿಕ್ ವಸ್ತುಗಳನ್ನುತೆಗೆದುಕೊಂಡುಬಂದಲ್ಲಿ ಅಂತಹ ಉಮೇದುದಾರರನ್ನು ಪರೀಕ್ಷೆಗೆ ಅನರ್ಹರೆಂದು ಪರಿಗಣಿಸಲಾಗುವುದು.

19. ಅಭ್ಯರ್ಥಿಯ ಅರ್ಹತೆಗೆ ಸಂಬಂಧಪಟ್ಟ ಎಲ್ಲ ವಿಷಯಗಳ ಬಗ್ಗೆ, ಆ ಅರ್ಹತೆಯ ಬಗ್ಗೆ ಕೈಗೊಳ್ಳಲಾಗುವ ಪರಿಶೀಲನೆಯ ವಿವಿಧ ಹಂತಗಳಲ್ಲಿ,ಶೈಕ್ಷಣಿಕ ವಿದ್ಯಾರ್ಹತೆ ಮತ್ತು ಇತರೆ ಅರ್ಹತೆಯ ಪ್ರಮಾಣಗಳಲ್ಲಿ ಬಿ.ಇ.ಎಲ್ ನ ನಿರ್ಣಯವೇ ಅಂತಿಮ ಮತ್ತು ಅಭ್ಯರ್ಥಿಗಳು ಇದಕ್ಕೆಬದ್ಧರಾಗಿರುತ್ತಾರೆ.

20.ಆಯ್ಕೆ ಪ್ರಕ್ರಿಯೆಯ ಎಲ್ಲಾ ಹಂತದಲ್ಲಿ ಅಭ್ಯರ್ಥಿಯ ಅಭ್ಯರ್ಥಿತನವು ತಾತ್ಕಾಲಿಕವಾಗಿರುವುದು. ಕೇವಲ ವಿದ್ಯಾರ್ಹತೆ ಮತ್ತು ಅನುಭವದಕನಿಷ್ಠ ಮಾನದಂಡವನ್ನು ಪೂರೈಸಿದ್ದಲ್ಲಿ ಅವರನ್ನು ಲಿಖಿತ ಪರೀಕ್ಷೆಕರೆಯಲು ಅಭ್ಯರ್ಥಿಗಳು ಹಕ್ಕನ್ನುಹೊಂದಿರುವುದಿಲ್ಲ.

21.ಅಭ್ಯರ್ಥಿತನವು ನೇಮಕಾತಿ/ಅರ್ಹತೆ/ಆಯ್ಕೆಯ ಪ್ರಕ್ರಿಯೆ ಅಥವಾ ನೇಮಕವಾದ ನಂತರ ಜಾಹೀರಾತಿನಲ್ಲಿ ಉಲ್ಲೇಖಿಸಿದ ಯಾವುದೇಮಾನದಂಡಗಳನ್ನು ಪೂರೈಸದ ಮಾಹಿತಿಯನ್ನು ನೀಡಿದ ಅಭ್ಯರ್ಥಿಯನ್ನು ಯಾವುದೇ ಹಂತದಲ್ಲಿ ತಿರಸ್ಕರಿಸಲು ಜವಾಬ್ದಾರರಾಗಿರುತ್ತಾರೆ. ಅಭ್ಯರ್ಥಿತನವು ಒಂದು ವೇಳೆ ಬಿ ಇ ಎಲ್ ಗೆ ಯಾವುದೇ ಸಾಕ್ಷ್ಯ/ಗಮನಕ್ಕೆ ಅರ್ಜಿಯಲ್ಲಿ ಸೂಚಿಸಿದವಿದ್ಯಾರ್ಹತೆ, ಅನುಭವ ಮತ್ತುಯಾವುದೇ ವಿವರಗಳು / ಇತರೆ ನಮೂನೆಗಳು / ಮಾನ್ಯತೆ ಇಲ್ಲದ ನಮೂನೆಗಳು / ಸುಳ್ಳು / ತಪ್ಪುದಾರಿಗೆ ಎಳೆಯುವಮತ್ತು ಮಾಹಿತಿಯನ್ನು ಮರೆಮಾಚುವ / ಬಿ ಇ ಎಲ್ ನ ಗಮನಕ್ಕೆ ತರಬೇಕಾಗುವಂತಹ ವಿವರಗಳುಕಂಡುಬಂದಲ್ಲಿ, ಯಾವುದೇಹಂತದಲ್ಲಿ ತಿರಸ್ಕಾರಕ್ಕೆ ಅಭ್ಯರ್ಥಿಯು ಹೊಣೆಗಾರರಾಗಿರುತ್ತಾರೆ.

23.ಯಾವುದೇ ರೀತಿಯ ಪ್ರಚಾರವು ಅನರ್ಹತೆಗೆ ಒಳಗಾಗುವುದು. ಯಾವುದೇ ಅಭ್ಯರ್ಥಿಗಳನ್ನು ಆಯ್ಕೆ ಪ್ರಕ್ರಿಯೆಯ ಯಾವುದೇ ಹಂತದಲ್ಲಿ ಬಹಿಷ್ಕಾರ / ಅನರ್ಹ ಗೊಳಿಸಲು ಬಿ ಇ ಎಲ್ ಅಧಿಕಾರ ಹೊಂದಿರುತ್ತದೆ.

24.ಆಂಗ್ಲ ಭಾಷೆ ಹೊರತು ಪಡಿಸಿ ಈ ಜಾಹಿರಾತಿನ ಇತರೆ ಯಾವುದೇ ಆವೃತ್ತಿಗಳಲ್ಲಿ ಅರ್ಥ ವಿವರಣೆಯ ಕುರಿತು ವಿವಾದಗಳು ಉಂಟಾದರೆ, ಬಿ.ಇ.ಎಲ್ ವೆಬ್ ಸೈಟ್ ನಲ್ಲಿರುವ ಆಂಗ್ಲ ಆವೃತ್ತಿಯು ಚಾಲ್ತಿಯಲ್ಲಿರುತ್ತದೆ.

25. ಈ ಭರ್ತಿ ಪ್ರಕ್ರಿಯೆ ಒಳಗೊಂಡಂತೆ ಜಾಹೀರಾತಿನಿಂದ ಉಂಟಾಗುವ ವಿವಾದಗಳು ಬೆಂಗಳೂರಿನಲ್ಲಿರುವ ನ್ಯಾಯಾಲಯದ ಏಕಮಾತ್ರಅಧಿಕಾರ ಕ್ಷೇತ್ರಕ್ಕೆ ಒಳಪಟ್ಟಿರುತ್ತದೆ.

26.ಬಿಇಎಲ್ ಸಂಸ್ಥೆಯು ಒಂದು ಧೃಡ ಹಾಗೂ ಪಾರದರ್ಶಕತೆಭರ್ತಿ ಪ್ರಕ್ರಿಯೆಯನ್ನು ಹೊಂದಿದ್ದು ಆಯ್ಕೆ ಮಾನದಂಡವು ಸಂಪೂರ್ಣವಾಗಿ ಅಭ್ಯರ್ಥಿಯ ಅರ್ಹತೆಯ ಆಧಾರದ ಮೇಲೆ ಅವಲಂಬಿಸಿರುತ್ತದೆ. ಬಿಇಎಲ್ ಈ ಜಾಹೀರಾತಿನಲ್ಲಿ ನೀಡಿದ ಅರ್ಜಿ ಶುಲ್ಕವನ್ನು ಹೊರತುಪಡಿಸಿ ಭರ್ತಿ ಪ್ರಕ್ರಿಯೆಯ ಯಾವುದೇ ಹಂತದಲ್ಲಿ ಯಾವುದೇ ಇತರೆ ಶುಲ್ಕ ಅಥವಾ ಹಣ ಸಂದಾಯ ಮಾಡಲು ಕೋರುವ /

ಬೇಡಿಕೆಯನ್ನು ಮಾಡುವುದಿಲ್ಲ. ಬಿಇಎಲ್ ನಲ್ಲಿ ಉದ್ಯೋಗ ನೀಡಲು ಈ ಕಂಪನಿಯ ಪ್ರತಿನಿಧಿಯನ್ನಾಗಿ ವರ್ತಿಸಿಹಣಪಾವತಿಸಲು ಕೋರಿ ಯಾವುದೇ ವಂಚಕರ ಸಂವಹನಕ್ಕೆ ಮೊರೆ ಹೋಗದಿರಲು ಉದ್ಯೋಗ ಆಕಾಂಕ್ಷಿಗಳಲ್ಲಿ ಅಗ್ರಹಿಸುತ್ತೇವೆ. ಅಂತಹ ವಂಚಕರ ಕೃತಿಯಿಂದ ಉಂಟಾಗುವ ಯಾವುದೇ ನಷ್ಟಕ್ಕೆ ಕಂಪನಿಯು ಹೊಣೆಯಲ್ಲ.

**ಅಂತಹ ಮೋಸ/ ವಂಚಕರಗಳ ವಿರುದ್ಧ ಕ್ರಿಮಿನಲ್ ಕ್ರಮ ಸಹಿತ ಕಾನೂನು ಕ್ರಮವನ್ನು ತೆಗೆದುಕೊಳ್ಳಲು ಬಿಇಎಲ್ ತನ್ನ ಅಧಿಕಾರವನ್ನು ಸುರಕ್ಷಿತವಾಗಿಡುತ್ತದೆ.**

27.ಈ ನೇಮಕಾತಿಗೆ ಸಂಬಂಧಿಸಿದ ಎಲ್ಲಾ ಮುಂದಿನ ಮಾಹಿತಿಗಳನ್ನು / ಪ್ರಕ್ರಿಯೆ ವಿವರಗಳನ್ನು ಕಾಲಕಾಲಕ್ಕೆ ಬಿಇಎಲ್ ವೆಬ್ ಸೈಟ್ http://www.bel-india.inನಲ್ಲಿಪ್ರಕಟಿಸಲಾಗುವುದು /ಒದಗಿಸಲಾಗುವುದು.

28. ಈ ಜಾಹೀರಾತನ್ನು ದ್ವಿಭಾಷೆಯಲ್ಲಿ (ಆಂಗ್ಲ ಮತ್ತು ಕನ್ನಡ ಭಾಷೆ) ಒದಗಿಸಲಾಗಿದೆ. ಜಾಹೀರಾತಿನ ಯಾವುದೇ ತಪ್ಪು ನಿರೂಪಣೆ ಉಂಟಾದಲ್ಲಿ, ಆಂಗ್ಲ ಆವೃತ್ತಿಯನ್ನು ಉಲ್ಲೇಖಿಸತಕ್ಕದ್ದು ಮತ್ತು ಅದೇ ಅಂತಿಮವಾಗಿರುತ್ತದೆ.

29. ಲಿಖಿತ ಪರೀಕ್ಷೆಯ ಅಂಕದ ಆಧಾರದ ಮೇಲೆ ತಾತ್ಕಾಲಿಕ ಪಟ್ಟಿಯಲ್ಲಿ/ ಆಯ್ಕೆಯಾದ ಅಭ್ಯರ್ಥಿಯನ್ನು ದಾಖಲೆಗಳ ಪರೀಶಿಲನೆಗಾಗಿಕರೆಯಲಾಗುತ್ತದೆ. ಅಂತಹ ಅಭ್ಯರ್ಥಿಗಳು ಮೂಲ ದಾಖಲೆಯಗಳನ್ನು ಮತ್ತು ಕೆಳಗೆ ನೀಡಲಾಗಿರುವ ದಾಖಲೆಗಳನ್ನು ಲಗತ್ತಿಸಿ ಆ ದಾಖಲೆಗಳನ್ನುಸಲ್ಲಿಸಬೇಕಾಗುತ್ತದೆ.

1. ಇತ್ತೀಚಿನ ವರ್ಣ ಪಾಸ್ ಪೋರ್ಟ್ ಆಕಾರ ಫೋಟೊ
2. ಎಸ್ ಎಸ್ ಎಲ್ ಸಿ / ಎಸ್ ಎಸ್ ಸಿ / ಐ ಎಸ್ ಸಿ ಅಂಕ ಪಟ್ಟಿ ಮತ್ತು ಜನ್ಮ ದಿನಾಂಕಕ್ಕೆ ಸಾಕ್ಷ್ಯವಾಗಿ ಯಾವುದೇ ಇತರೆ ಊರ್ಜಿತ ದಾಖಲೆ.
3. ಶೈಕ್ಷಣಿಕ ವಿದ್ಯಾರ್ಹತೆಗೆ ಪೂರಕವಾಗಿ ಎಸ್ ಎಸ್ ಎಲ್ ಸಿ ಯಿಂದ ಪ್ರಾರಂಭವಾಗುವ ಎಲ್ಲಾ ಪ್ರಮಾಣಪತ್ರಗಳು. ಐಟಿಐ / ಎನ್ ಎ ಸಿ/ ಎಂಜಿನಿಯರಿಂಗ್ ನಲ್ಲಿ ಡಿಪ್ಲೊಮಾ / ಅನ್ವಯವಾಗುವ ಪದವಿಯ ಪ್ರತಿ ಶೈಕ್ಷಣಿಕ ವರ್ಷ/ ಸೆಮಿಸ್ಟರ್ ನ ಅಂಕ ಪತ್ರಗಳು.
4. ಸಕ್ಷಮ ಪ್ರಾಧಿಕಾರಿ / ಬೋರ್ಡ್ ನಿಂದ ವಿತರಿಸಿದಐಟಿಐ / ಎನ್ ಎ ಸಿ / ಎಂಜಿನಿಯರಿಂಗ್ ನಲ್ಲಿ ಡಿಪ್ಲೊಮಾ / ಪದವಿ ಪೂರ್ಣಗೊಂಡ ಪ್ರಮಾಣಪತ್ರಕ್ಕೆ ಸಂಬಂಧಪಟ್ಟ ಅಂತಿಮ ಪ್ರಮಾಣಪತ್ರ / ಘಟಿಕೋತ್ಸವ ಪ್ರಮಾಣಪತ್ರ.
5. ಅಪ್ರೆಂಟಿಸ್ ಶಿಪ್ ಅಂಕ ಪತ್ರಗಳು ಮತ್ತು ಎನ್ ಎ ಸಿ (ತಂತ್ರಜ್ಞ 'ಸಿ' ಹುದ್ದೆಗೆ ಮಾತ್ರ)
6. ಪ.ಜಾ./ಪ.ಪಂ./ಇ.ಹಿ.ವ./ ಪಿ.ಡಬ್ಲ್ಯು.ಡಿ./ಇ.ಡಬ್ಲ್ಯುಎಸ್ ಗೆ ಸಂಬಂಧಿಸಿದ ಅಭ್ಯರ್ಥಿಗಳು ನಿರ್ಧಾರಿತ ನಮೂನೆಯಲ್ಲಿ ತಮ್ಮ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.
7. ಇ.ಹಿ.ವ. ವರ್ಗಕ್ಕೆ ಸಂಬಂಧಿಸಿದ ಅಭ್ಯರ್ಥಿಗಳು ದಿನಾಂಕ ೦೧.೦೮.೨೦೨೨ ರಂದು ಅಥವಾ ನಂತರ ನಿರ್ಧಾರಿತ ನಮೂನೆಯಲ್ಲಿ ಸಕ್ಷಮ ಅಧಿಕಾರಿಯವರಿಂದ***ವಿತರಿಸಿದ ಸಮುದಾಯ ಪ್ರಮಾಣಪತ್ರವನ್ನು ಸಲ್ಲಿಸಬೇಕು ಮತ್ತು ೨೦೨೨-೨೩ ಸಾಲಿಗೆ ಸಕ್ಷಮ ಅಧಿಕಾರಿಯವರಿಂದ***ವಿತರಿಸಿದ ಇ.ಡಬ್ಲ್ಯು.ಎಸ್ ಪ್ರಮಾಣಪತ್ರವನ್ನು ಸ್ವೀಕರಿಸಲಾಗುವುದು.(ನಿರ್ಧಾರಿತ ನಮೂನೆಗಳನ್ನು ವೆಬ್ ಸೈಟ್ www.bel-india.in ನಲ್ಲಿ ಒದಗಿಸಲಾಗಿದೆ.
8. ಸಂಗತ ಅಸಮರ್ಥನೀಯತೆ ೪೦% ಕ್ಕಿಂತ ಕಡಿಮೆಯಿಲ್ಲದ ವ್ಯಕ್ತಿಗಳು ಮಾತ್ರ ಪಿ.ಡಬ್ಲ್ಯು.ಡಿ ಯಾಗಿ ಮೀಸಲಾತಿ ಮತ್ತು ಸಡಿಲಿಕೆಗೆ ಅರ್ಹರಿರುವರು. ವೈದ್ಯಕೀಯ ಮಂಡಲಿಯಿಂದ ಪಡೆದ ನಿಗದಿತ ನಮೂನೆಯಲ್ಲಿ ಅಸಮರ್ಥನೀಯತೆ ಪ್ರಮಾಣಪತ್ರವನ್ನು ಸಲ್ಲಿಸಬೇಕು .(ನಿರ್ಧಾರಿತ ನಮೂನೆಗಳನ್ನು ವೆಬ್ ಸೈಟ್ www.bel-india.in ನಲ್ಲಿ ಒದಗಿಸಲಾಗಿದೆ.)
9. ಪ್ರಸ್ತುತ ನೇಮಕಮಾಡಿಕೊಂಡವರಿಂದ ಅಕ್ಷೇಪಣಾ ರಹಿತ ಪ್ರಮಾಣಪತ್ರ (ಸರ್ಕಾರಿ / ಅರೆ ಸರ್ಕಾರಿ/ ಪಿ ಎಸ್ ಯು ನಲ್ಲಿ ನೇಮಕ ಗೊಂಡಲ್ಲಿ) ಅನ್ವಯಿಸಿದ್ದಲ್ಲಿ. ಇದನ್ನು ಅನುಭವ ವಿವರಣೆಯಲ್ಲಿ ಲಗತ್ತಿಸತಕ್ಕದ್ದು.
10. ಈ ಮೇಲಿನ ಹುದ್ದೆಗಾಗಿ ಅರ್ಜಿ ಸಲ್ಲಿಸುವ ಮಾಜಿ ಸೈನಿಕರು ಭಾರತೀಯ ರಕ್ಷಣಾ ಬಲದಿಂದ (ಭೂಸೇನೆ / ನೌಕಾ ಪಡೆ / ವಾಯು ಸೇನೆ) ನೀಡಲಾದ ಡಿಸ್ಚಾರ್ಜ್ ಪುಸ್ತಕವನ್ನು ಅಪ್ ಲೋಡ್ ಮಾಡತಕ್ಕದ್ದು.
11. ವಿಶ್ವವಿದ್ಯಾಲಯ / ಸಂಸ್ಥೆಯ ಮೂಲಕ ಸಿ.ಜಿ.ಪಿ.ಎ. ನಿಂದ ಶೇಕಡವಾರುಗೆ ಪರಿವರ್ತನೆ ಮಾಡಲು ಅಳವಡಿಸಿಕೊಂಡ ನಿಯಮಗಳ ಪುರಾವೆ, ಯಾವುದೇ ಇದ್ದಲ್ಲಿ.

12. ಕರ್ನಾಟಕದ ಉದ್ಯೋಗ ವಿನಿಮಯದಲ್ಲಿನ ಮಾನ್ಯ ಉದ್ಯೋಗ ನೋಂದಣಿ ಕಾರ್ಡ್. ಉದ್ಯೋಗ ವಿನಿಮಯ ನೋಂದಣಿಯು ೦೫.೦೯.೨೦೨೩ ರಂದು ಮಾನ್ಯ ಮತ್ತು ಸಕ್ರಿಯ ಸ್ಥಿತಿಯಲ್ಲಿರತಕ್ಕದ್ದು.

ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ೦೫.೦೯.೨೦೨೩

ಜಾಹೀರಾತಿಗೆ ಮತ್ತು ಅರ್ಜಿ ಶುಲ್ಕ ಪಾವತಿಗೆ ಸಂಬಂಧಪಟ್ಟ ಪ್ರಶ್ನೆಗಳಿಗಾಗಿ belbgrec@bel.co.inಗೆ ಇ-ಮೇಲ್, ದೂರವಾಣಿ ಸಂಖ್ಯೆ.080-22195369 ಮುಖೇನ ನಮ್ಮನ್ನು ಸಂಪರ್ಕಿಸಿ.

ಆನ್ ಲೈನ್ ಮೂಲಕ ಅರ್ಜಿ ನಮೂನೆಯನ್ನು ಸಲ್ಲಿಸುವುದಕ್ಕೆ ಸಂಬಂಧಪಟ್ಟ ತಾಂತ್ರಿಕ ನೆರವಿಗಾಗಿ ದಯವಿಟ್ಟು belbng@applycareer.co.inಇ-ಮೇಲ್ ಮುಖೇನ ಸಂಪರ್ಕಿಸಿ.

---

**ಟಿಪ್ಪಣಿ:** ಈ ಕೆಳಕಂಡ ಯಾವುದೇ ಪ್ರಾಧಿಕಾರಿಗಳಿಂದ ನಿರ್ಧಾರಿತ ಪ್ರಪತ್ರದಲ್ಲಿ ಜಾರಿಯಾಗಿರುವ ಇ.ಹಿ.ವರ್ಗದ ಪ್ರಮಾಣ ಪತ್ರ (ಮೇಲ್ಪದರ ವರ್ಗ) ಮತ್ತು ಇ.ಡಬ್ಲ್ಯೂ.ಎಸ್ ಗೆ ಆದಾಯ ಮತ್ತು ಆಸ್ತಿ ಪ್ರಮಾಣ ಪತ್ರವು ಇ.ಹಿ.ವ/ ಇ.ಡಬ್ಲ್ಯೂ.ಎಸ್ ವರ್ಗದ ಅಭ್ಯರ್ಥಿಗಳ ಪ್ರಮಾಣವಾಗಿ ಸ್ವೀಕರಿಸಲಾಗುತ್ತದೆ.

*i.* ಜಿಲ್ಲಾ ಮ್ಯಾಜಿ ಸ್ಟ್ರೇಟ್ / ಪೂರಕ ಜಿಲ್ಲಾ ಮ್ಯಾಜಿ ಸ್ಟ್ರೇಟ್/ ಕಲೆಕ್ಟರ್ / ಉಪ ಕಮಿಷ್ ನರ್ / ಪೂರಕ ಉಪ ಕಮಿಷ್ ನರ್/ ಪ್ರಥಮಶ್ರೇಣಿ ಸ್ಟೈಪೆನ್ಡರಿ ಮ್ಯಾಜಿ ಸ್ಟ್ರೇಟ್ / ಸಬ್ ಡಿವಿಶನಲ್ ಮ್ಯಾಜಿ ಸ್ಟ್ರೇಟ್ / ತಾಲೂಕು ಮ್ಯಾಜಿ ಸ್ಟ್ರೇಟ್ / ಎಕ್ಸಿಕ್ಯೂಟಿವ್ ಮ್ಯಾಜಿ ಸ್ಟ್ರೇಟ್ / ಎಕ್ಸ್ಟ್ರಾಅಸಿಸ್ಟೆಂಟ್ ಕಮಿಷ್ನರ್

*ii.* *ಚೀಫ್ ಪ್ರೇಸಿಡೆನ್ಸಿ ಮ್ಯಾಜಿ ಸ್ಟ್ರೇಟ್ /ಅಡಿಶನಲ್ ಚೀಫ್ ಪ್ರೇಸಿಡೆನ್ಸಿ ಮ್ಯಾಜಿ ಸ್ಟ್ರೇಟ್ / ಪ್ರೇಸಿಡೆನ್ಸಿ ಮ್ಯಾಜಿ ಸ್ಟ್ರೇಟ್*

*iii.* *ಚೀಫ್ ಪ್ರೇಸಿಡೆನ್ಸಿ ಮ್ಯಾಜಿ ಸ್ಟ್ರೇಟ್ /ಅಡಿಶನಲ್ ಚೀಫ್ ಪ್ರೇಸಿಡೆನ್ಸಿ ಮ್ಯಾಜಿ ಸ್ಟ್ರೇಟ್ / ಪ್ರೇಸಿಡೆನ್ಸಿ ಮ್ಯಾಜಿ ಸ್ಟ್ರೇಟ್*

iv. *ಅಭ್ಯರ್ಥಿ ಹಾಗೂ/ ಅಥವ ಅವರ ಕುಟುಂಬವೂ ಸಾಮಾನ್ಯವಾಗಿ ವಾಸಿಸುವ ಸ್ಥಳದ ಉಪ ವಿಭಾಗಾಧಿಕಾರಿ*